**Akashvani : Bangalore**
**Regional Bulletin In Kannada**
**12.09.2025 : 2.30 pm**

**ಆಕಾಶವಾಣಿ ಬೆಂಗಳೂರು**

**ಪ್ರದೇಶ ಸಮಾಚಾರ**

**12.09.2025 : 2.30 pm**

*********

## ಮುಖ್ಯಾಂಶಗಳು

೧. ರಾಜ್ಯದ ಎರಡು ಕೋಟಿ ಮನೆಗಳ ಸಮಗ್ರ, ಸಾಮಾಜಿಕ, ಆರ್ಥಿಕ ಶೈಕ್ಷಣಿಕ ಸಮೀಕ್ಷೆ ಸಕ್ರಿಯ ಸಹಕಾರಕ್ಕೆ ಮುಖ್ಯಮಂತ್ರಿ ಮನವಿ

೨. ಭಾರತೀಯ ಗಗನಯಾನಿಗಳನ್ನು ನಭಕ್ಕೆ ರವಾನಿಸುವ ಗಗನಯಾನ ಯೋಜನೆಗೆ ಇಸ್ರೋದಲ್ಲಿ ಕೊನೆಯ ಹಂತದ ಸಿದ್ಧತೆ

೩. ಶ್ರೀರಂಗಪಟ್ಟಣ, ಮಡಿಕೇರಿ ದಸರಾಕ್ಕೆ ಭರದ ಸಿದ್ಧತೆ

೪. ಕೋಲಾರ; ಉದ್ಯಾನವನಗಳ ಸ್ವಚ್ಛತೆಗೆ ವಿಶೇಷ ತಂಡ ರಚನೆ

*><><><*><><><*

ಇದೇ ೨೨ ರಿಂದ ಅಕ್ಟೋಬರ್ ೭ರ ವರೆಗೆ ನಡೆಯಲಿರುವ ಸಮಗ್ರ ಸಾಮಾಜಿಕ-ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಕರ್ನಾಟಕದ ಎಲ್ಲಾ ನಾಗರಿಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಮನವಿ ಮಾಡಿದ್ದಾರೆ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಮೀಕ್ಷೆಯನ್ನು ಕೈಗೊಳ್ಳುತ್ತಿದ್ದು, ದಶಕದ ಹಿಂದೆ ಕಾಂತರಾಜ್ ಆಯೋಗ ಸಲ್ಲಿಸಿದ್ದ ಹಿಂದಿನ ವರದಿಯನ್ನು ಸರ್ಕಾರ ಸ್ವೀಕರಿಸದ ಕಾರಣ ಈ ಸಮೀಕ್ಷೆ ಅಗತ್ಯವಾಗಿದೆ ಎಂದು ಅವರು ಹೇಳಿದರು. ಸಾಮಾಜಿಕ ನ್ಯಾಯವನ್ನು ಸಾಧಿಸುವ ಮತ್ತು

ಸಂವಿಧಾನದಲ್ಲಿ ಪ್ರತಿಪಾದಿಸಿರುವಂತೆ ಎಲ್ಲರಿಗೂ ಸಮಾನ ಅವಕಾಶಗಳನ್ನು ಒದಗಿಸುವ ನಿಟ್ಟಿನಲ್ಲಿ ಸಮೀಕ್ಷೆಯು ನಿರ್ಣಾಯಕ ಹೆಜ್ಜೆಯಾಗಿದೆ. "ಸ್ವಾತಂತ್ರ್ಯದ ದಶಕಗಳ ನಂತರವೂ ಅಸಮಾನತೆ ಮುಂದುವರಿದಿದ್ದು, ಪ್ರಜಾಪ್ರಭುತ್ವವನ್ನು ಬಲಪಡಿಸಲು, ಈ ಅಸಮಾನತೆಗಳನ್ನು ತೊಡೆದುಹಾಕಬೇಕು. ಈ ಸಮೀಕ್ಷೆಯು ಎಲ್ಲರಿಗೂ ಪರಿಣಾಮಕಾರಿ ಕಲ್ಯಾಣ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಲು ಅಗತ್ಯವಾದ ದತ್ತಾಂಶವನ್ನು ಒದಗಿಸುತ್ತದೆ" ಎಂದು ಅವರು ಹೇಳಿದರು. ಈ ಸಮೀಕ್ಷೆಯು ರಾಜ್ಯದ ೨ ಕೋಟಿ ಮನೆಗಳಲ್ಲಿ ಸುಮಾರು ೭ ಕೋಟಿ ಜನರ ಸಂಪೂರ್ಣ ಜನಸಂಖ್ಯೆಯನ್ನು ಒಳಗೊಳ್ಳುವ ಗುರಿಯನ್ನು ಹೊಂದಿದೆ. ಇದು ಪ್ರತಿ ಕುಟುಂಬದ ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಮತ್ತು ಆರ್ಥಿಕ ಸ್ಥಿತಿಯ ಬಗ್ಗೆ ವಿವರವಾದ ಮಾಹಿತಿಯನ್ನು ಸಂಗ್ರಹಿಸುತ್ತದೆ ಎಂದು ಅವರು ತಿಳಿಸಿದ್ದಾರೆ. ಸುಗಮ ಪ್ರಕ್ರಿಯೆಯನ್ನು ಖಚಿತಪಡಿಸಿಕೊಳ್ಳಲು, ದಸರಾ ರಜೆಯ ಸಮಯದಲ್ಲಿ ಸಮೀಕ್ಷೆಯನ್ನು ನಡೆಸಲು ಸರ್ಕಾರ ಒಂದು ಲಕ್ಷದ ೭೫ ಸಾವಿರ ಶಿಕ್ಷಕರನ್ನು ನಿಯೋಜಿಸುತ್ತದೆ. ಈ ಶಿಕ್ಷಕರಿಗೆ ತಲಾ ೨೦ ಸಾವಿರ ರೂಪಾಯಿಗಳವರೆಗೆ ಗೌರವಧನವನ್ನು ನೀಡಲಾಗುತ್ತದೆ, ಈ ಉದ್ದೇಶಕ್ಕಾಗಿ ಒಟ್ಟು ೩೨೫ ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಲಾಗುತ್ತದೆ. ಸಂಪೂರ್ಣ ಕಾರ್ಯಾಚರಣೆಗಾಗಿ ೪೨೦ ಕೋಟಿ ರೂಪಾಯಿಗಳ ತಾತ್ಕಾಲಿಕ ಬಜೆಟ್ ಅನ್ನು ಮೀಸಲಿಡಲಾಗಿದೆ, ಅಗತ್ಯವಿದ್ದರೆ ಹೆಚ್ಚುವರಿ ನಿಧಿ ಒದಗಿಸಲಾಗುವುದು ಎಂದು ಅವರು ವಿವರಿಸಿದರು.

**ಧ್ವನಿ : ಮುಖ್ಯಮಂತ್ರಿ ಸಿದ್ದರಾಮಯ್ಯ ( ೪೦ ಸೆಕೆಂಡುಗಳು)**

ಮಧುಸೂದನ್ ನಾಯಕ್ ಅಧ್ಯಕ್ಷತೆಯ ಆಯೋಗಕ್ಕೆ ಈ ಕಾರ್ಯವನ್ನು ವೈಜ್ಞಾನಿಕವಾಗಿ ನಡೆಸಲು ಸೂಚಿಸಲಾಗಿದೆ, ಯಾರನ್ನೂ ಬಿಡಲಾಗುವುದಿಲ್ಲ ಎಂದು

ಖಚಿತಪಡಿಸಿಕೊಳ್ಳಲಾಗಿದೆ. ಡಿಸೆಂಬರ್ ೨೦೨೫ರ ವೇಳೆಗೆ ಅಂತಿಮ ವರದಿಯನ್ನು ನಿರೀಕ್ಷಿಸಲಾಗಿದೆ ಎಂದು ಅವರು ಹೇಳಿದರು.

*><><><*><><><*

ಭಾರತೀಯ ಗಗನಯಾನಿಗಳನ್ನು ನಭಕ್ಕೆ ರವಾನಿಸಿ ಅಂತರಿಕ್ಷಯಾನ ಕೈಗೊಳ್ಳುವ ಯೋಜನೆ ಗಗನಯಾನಕ್ಕೆ ಇಸ್ರೋ ಸಂಸ್ಥೆ ಕಡೆಯ ಹಂತದ ಸಿದ್ಧತೆಗಳನ್ನು ನಡೆಸುತ್ತಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಇಸ್ಟ್ರ್ಯಾಕ್ ವಿಜ್ಞಾನಿ ಶ್ರೀನಾಥ್ ರತ್ನಕುಮಾರ್ ತಿಳಿಸಿದ್ದಾರೆ. ಆಕಾಶವಾಣಿ ಬೆಂಗಳೂರು ಸುದ್ದಿ ವಿಭಾಗದೊಂದಿಗೆ ಮಾತನಾಡಿದ ಅವರು, ಗಗನಯಾನ ಯೋಜನೆ ಮೂಲಕ ಭಾರತ ಅಂತರಿಕ್ಷದಲ್ಲಿ ತನ್ನದೇ ಬಾಹ್ಯಾಕಾಶ ಕೇಂದ್ರ ಸ್ಥಾಪಿಸಲು ನೆರವಾಗಲಿದೆ. ಗಗನಯಾನ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಇದಾಗಲಿದೆ ಎಂದು ಅವರು ತಿಳಿಸಿದರು.

**** ಧ್ವನಿ ***ಶ್ರೀನಾಥ್ ರತ್ನಕುಮಾರ್ ( ೧.೧೬ ಸೆಕೆಂಡುಗಳು)

*><><><*><><><*

ನಾಡಹಬ್ಬ ಮೈಸೂರು ದಸರಾದ ಮೂಲ ಶ್ರೀರಂಗಪಟ್ಟಣ ಪಾರಂಪರಿಕ ದಸರಾವನ್ನು ಈ ಬಾರಿ ಇದೇ ೨೫ ರಿಂದ ೨೮ರ ವರೆಗೆ ಅದ್ದೂರಿಯಾಗಿ ಆಚರಿಸಲಾಗುತ್ತಿದ್ದು, ಲೋಗೋ ವನ್ನು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅವರು ಬಿಡುಗಡೆಗೊಳಿಸಿದರು. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಲೋಗೋ ಬಿಡುಗಡೆಯ ನಂತರ ಮಾತನಾಡಿ, ಈ ಬಾರಿಯ ಶ್ರೀರಂಗಪಟ್ಟಣ ದಸರಾ ಕಾರ್ಯಕ್ರಮವನ್ನು ಖ್ಯಾತ ಚಲನಚಿತ್ರ ನಿರ್ದೇಶಕ ಹಾಗೂ ನಟ ಟಿ.ಎಸ್. ನಾಗಾಭರಣ ಅವರು ನೆರವೇರಿಸಲಿದ್ದಾರೆ ಎಂದರು. ಇದೇ ಸಂದರ್ಭದಲ್ಲಿ

ಶಾಸಕರಾದ ರಮೇಶ್ ಬಾಬು ಬಂಡಿಸಿದ್ದೇಗೌಡ, ಪಿ.ರವಿಕುಮಾರ್, ಜಿಲ್ಲಾಧಿಕಾರಿ ಡಾ.ಕುಮಾರ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

*><><><*><><><*

ಮಡಿಕೇರಿಯ ನಾಡಹಬ್ಬ ದಸರಾಕ್ಕೆ ಒಂದು ಕೋಟಿ ೫೦ ಲಕ್ಷ ರುಪಾಯಿಗಳ ಅನುದಾನ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ ಎಂದು ಮಡಿಕೇರಿ ದಸರಾ ಸಮಿತಿಯ ನಿಯೋಗವು ಮಡಿಕೇರಿ ಶಾಸಕ ಡಾ.ಮಂಥರ್ ಗೌಡ ಹೇಳಿದ್ದಾರೆ. ಮಡಿಕೇರಿ ದಸರಾ ಸಮಿತಿಯ ನಿಯೋಗ ಅವರ ನೇತೃತ್ವದಲ್ಲಿ, ಮುಖ್ಯಮಂತ್ರಿಯನ್ನು ಭೇಟಿಯಾಗಿ ಅನುದಾನಕ್ಕಾಗಿ ಮನವಿ ಸಲ್ಲಿಸಿತು. ಈ ಸಂದರ್ಭ ಕಳೆದ ವರ್ಷದಂತೆಯೇ ಒಂದು ಕೋಟಿ ೫೦ ಲಕ್ಷ ರುಪಾಯಿ ಅನುದಾನ ನೀಡುವುದಾಗಿ ಸಿದ್ದರಾಮಯ್ಯ ಘೋಷಿಸಿದರು.

*><><><*><><><*

ಮಕ್ಕಳು ತಮ್ಮ ಕನಸು ಈಡೇರಿಸುವ ಹೆಬ್ಬಯಕೆಯೊಂದಿಗೆ ಹುಸಿ ಸಕಾರಾತ್ಮಕ ಸ್ಫೂರ್ತಿ ಹೊಂದುವ ಬದಲು ತಮ್ಮ ಗುರಿಯ ಸಾಧನೆಗೆ ಪರಿಶ್ರಮ ಪಡಬೇಕೆಂದು ಇಸ್ರೋದ ಇಸ್ಟ್ರ್ಯಾಕ್ ವಿಜ್ಞಾನಿ ಶ್ರೀನಾಥ್ ರತ್ನ ಕುಮಾರ್ ತಿಳಿಸಿದ್ದಾರೆ. ಬೆಂಗಳೂರು ತಾರಾಲಯದಲ್ಲಿ ಇಂದಿನಿಂದ ಇದೇ ೧೪ ರವರೆಗೂ ಹಮ್ಮಿಕೊಳ್ಳಲಾಗಿರುವ ವಿಜ್ಞಾನ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿವರ್ಷ ದೇಶದಲ್ಲಿ ೩೫ ಲಕ್ಷ ಇಂಜಿನಿಯರ್‌ಗಳು ಉತ್ತೀರ್ಣರಾಗುತ್ತಿದ್ದಾರೆ. ನೀಟ್‌ನಲ್ಲಿ ತೀವ್ರ ಪೈಪೋಟಿ ಎದುರಿಸಬೇಕಾಗಿದೆ. ಈ ನಿಟ್ಟಿನಲ್ಲಿ ಸಾಧನೆಗೆ ಪರಿಶ್ರಮ ಒಂದೇ ಪರಿಹಾರ. ಬಾಹ್ಯಾಕಾಶ ವಿಜ್ಞಾನದಿಂದ ಆರ್ಥಿಕ ಪ್ರಗತಿ ಸಾಧಿಸುವತ್ತ ಭಾರತ ಸಾಗಿದೆ ಎಂದು ಅವರು ತಿಳಿಸಿದರು. ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಜವಾಹರ್ ಲಾಲ್ ನೆಹರು ತಾರಾಲಯದ ನಿರ್ದೇಶಕ ಡಾ.ಬಿ.ಆರ್.ಗುರುಪ್ರಸಾದ್, ವೀಕ್ಷಣೆ, ಪ್ರಯೋಗ,

ಪ್ರಶ್ನೆ ಕೇಳುವ ಹವ್ಯಾಸ ಹಾಗೂ ಜಿಜ್ಞಾಸೆ ಮೂಲಕ ವಿಜ್ಞಾನ ಬೆಳೆಸಲು ಸಾಧ್ಯ. ಜನಕಲ್ಯಾಣಕ್ಕೆ ಉಪಯುಕ್ತ ಆವಿಷ್ಕಾರಗಳನ್ನು ವಿಜ್ಞಾನದ ಮೂಲಕ ಸಾಧಿಸಲಾಗಿದೆ. ಭಾರತದಲ್ಲಿ ಉಪಗ್ರಹ ಸಂವಹನ ತಂತ್ರಜ್ಞಾನದಿಂದ ಹಲವಾರು ಉಪಯುಕ್ತ ಯೋಜನೆಗಳಿಗೆ ರೂಪುರೇಷೆ ನೀಡಲಾಗಿದೆ. ವಿಜ್ಞಾನ ಪ್ರದರ್ಶನದ ಮೂಲಕ ಶಾಲಾ ಮಕ್ಕಳಲ್ಲಿ ವಿಜ್ಞಾನದ ಪರ ಉತ್ಸಾಹ ಹೆಚ್ಚಿಸುವ ಉದ್ದೇಶ ಹೊಂದಲಾಗಿದೆ ಎಂದು ತಿಳಿಸಿದರು.

**ಧ್ವನಿ : ಡಾ.ಬಿ.ಆರ್ ಗುರುಪ್ರಸಾದ್ ( ೪೮ ಸೆಕೆಂಡುಗಳು)**

*><><><*><><><*

ಕೋಲಾರ ಜಿಲ್ಲೆಯಲ್ಲಿ ಉದ್ಯಾನವನಗಳನ್ನು ಸ್ವಚ್ಛತೆ ಮಾಡುವ ನಿಟ್ಟಿನಲ್ಲಿ ವಿಶೇಷವಾಗಿ ಒಂದು ತಂಡವನ್ನು ರಚನೆ ಮಾಡಿ ಎಲ್ಲಾ ಭಾಗಗಳಲ್ಲಿಯೂ ಸ್ವಚ್ಛತೆಯನ್ನು ಕಾಪಾಡುವುದು ಮತ್ತು ಜೊತೆಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಕೋಲಾರಮ್ಮ ಸ್ವಚ್ಛತಾ ಕಾರ್ಯ ಪಡೆ ಸಿದ್ಧವಾಗುತ್ತಿದೆ ಎಂದು ಜಿಲ್ಲಾಧಿಕಾರಿ ಡಾ.ಎಂ.ಆರ್. ರವಿ ತಿಳಿಸಿದರು.

*><><><*><><><*